ಸಿ.ಸಿ ನಂಬ್ರಃ 1111/2023
ಡಿ.ಡಬ್ಲ್ಯೂ : 2

ದಿನಾಂಕಃ 27-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು : ಪಿರ್ಯಾದಿ ಪರ ಶ್ರೀ ಎಂ.ಎಮ್. ಎಚ್. ವಕೀಲರಿಂದ

1. ಸಾಗರ ಕೋ - ಆಪರೇಟಿವ್ ಸೊಸೈಟಿಯಲ್ಲಿ 2005 ರಿಂದ 2020 ರವರೆಗೆ ಪಿಗ್ಮಿ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನು.ಪಿಗ್ಮಿ ಎಂದರೆ ಪ್ರತಿ ನಿತ್ಯ ಹಣ ಸಂಗ್ರಹಿ ಸಿ ಅವರ ಖಾತೆಗೆ ಹಾಕುವುದು ಎಂದರೆ ಸರಿ. ನಾನು ರಮೇಶ ಹಾಗೂ ಸುರೇಶ್ ರವರ ಪಿಗ್ಮಿ ಕಲೆಕ್ಷನ್ ನ್ನು ನಾನು ಮಾಡುತ್ತಿರಲಿಲ್ಲ. 2021-2022 ರಲ್ಲಿ ನನ್ನನ್ನು ಕೆಲಸದಿಂದ ತೆಗೆದು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನಾನು 20 ಲಕ್ಷಕ್ಕೆ ನಾನು ಭದ್ರತೆ ಕೊಟ್ಟಿದ್ದು, ನನ್ನ ಕಮಿಷನ್ ಹಣವನ್ನು ಸಾಲದ ಹಣಕ್ಕೆ ಸೊಸೈಟಿ ಯವರು ಹಾಕುತ್ತೇನೆ ಎಂದು ಹೇಳಿದ್ದರಿಂದ ನಾನು ಕೆಲಸ ಬಿಟ್ಟಿರುತ್ತೇನೆ.

2. ನನ್ನ ಕಮಿಷನ್ ಹಣವನ್ನು ಸಾಲದ ಹಣಕ್ಕೆ ಹಾಕಿರುವುದಿಲ್ಲ. ಪಿಗ್ಮಿ ಹಣವನ್ನು ನಾನು ಸರಿಯಾಗಿ ಕಟ್ಟದೇ ಇದ್ದು, ಹಣವನ್ನು ದುರುಪಯೋಗ ಮಾಡಿಕೊಂಡಿದ್ದರಿಂದ ತನಿಖೆ ಮಾಡಿ ನನ್ನನ್ನು ಕೆಲಸದಿಂದ ತೆಗೆದುಹಾಕಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರವನ್ನು ದೂರುದಾರನಿಗೆ ಪಾಟೀ ಸವಾಲು ಮಾಡುವ ಸಂದರ್ಭದಲ್ಲಿ ನನ್ನ ವಕೀಲರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

3. ನ್ಯಾಯಲಯದಲ್ಲಿ ಕಲಂ 313 ರಡಿಯಲ್ಲಿ ನನ್ನ ಹೇಳಿಕೆಗಳನ್ನು ದಾಖಲಿಸುವಾಗ ಕೊಟ್ಟಂತಹ ದಾಖಲೆಯಲ್ಲಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳನ್ನು ಬರೆದಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿಯ ವಿಚಾರವನ್ನು ತಮ್ಮ ಅಣ್ಣನಿಗೆ ಹೆಳಿದ್ದೀರಾ ಎಂದರೆ ಸಾಕ್ಷಿ ಅವರಿಗೆ ಸ್ವತಃ ವಿಚಾರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಚಾರಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

4. ಸತೀಶ ಪೂಜಾರಿಯವರು ಅವರ ಭಾರತ ಕೋ ಆಪರೇಟಿವ್ ಸೊಸೈಟಿ ಖಾತೆಯಿಂದ ನನ್ನ ಖಾತೆಗೆ ಹಣವನ್ನು ಜಮಾ ಮಾಡಿರುತ್ತಾರೆ. ಸಾಕ್ಷಿ 2 -3 ಬಾರಿ ಹಣ ಕೊಟ್ಟಿರುತ್ತಾರೆ ಎಂದು

ನುಡಿಯುತ್ತಾರೆ. ದಿನಾಂಕ 23-01-2018 ರಿಂದ ನನ್ನ ಖಾತೆಗೆ ಹಣ ಹಾಕಿರುವುದಿಲ್ಲ. ಒಟ್ಟು ಎಷ್ಟು ಹಣ ಹಾಕಿರುತ್ತಾರೆ ಎಂದು ನೆನಪಿರುವುದಿಲ್ಲ. 2018 ರಲ್ಲಿ 3 ಬಾರಿ ಹಣ ಹಾಕಿರುತ್ತಾರೆ. ಸದರಿ ಹಣವನ್ನು ನಿರಂಜನ ಆಚಾರಿ, ವಿಜಯ ಪೂಜಾರಿ, ರವೀಂದ್ರ ಶೇರಿಗಾರ, ತಲ್ಲೂರು ಪ್ರವೀಣ ಪೂಜಾರಿ, ಶರತ್ ಆಚಾರ್ಯ ಕುಂಭಾಶಿ, ವಿಜಯ ಪೂಜಾರಿ ಹಲ್ತೂರು ವಕ್ವಾಡಿ, ಚಂದ್ರ ಶೇಖರ ಕಾಗೇರಿ, ಕೋಟೇಶ್ವರ ಕೊಟ್ಟಿರುತ್ತೇನೆ. ಇವರಿಗೆ ಎಷ್ಟು ಎಷ್ಟು ಹಣ ಕೊಟ್ಟಿರುತ್ತೇನೆ ಎಂದು ನೆನಪಿರುವುದಿಲ್ಲ. ಸದರಿ ಹಣವನ್ನು ಕೊಟ್ಟ ಬಗ್ಗೆ ನಾನು ಬರೆದಿಟ್ಟುಕೊಂಡಿರುವುದಿಲ್ಲ.

5. ಪಿರ್ಯಾದಿದಾರನಿಗೆ ಹಣ ಕೊಡುವುದಿದ್ದರೆ ಸದರಿಯವರ ಖಾತೆಗೆ ಹಾಕುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಹಣ ತೆಗೆದುಕೊಳ್ಳುವವರು ಪಿಗ್ಮಿ ರವರ ಮುಖಾಂತರ ಕಳುಹಿಸಿ ಎಂದು ಹೇಳಿದ್ದರಿಂದ ನಾನು ತೆಗೆದುಕೊಂಡು ಹೋಗಿ ಕೊಟ್ಟಿರುವುದಾಗಿ ನುಡಿಯುತ್ತಾರೆ. ನನ್ನ ಖಾತೆಗೆ ಬಂದ ಹಣವನ್ನು ನಾನು ಬೇರೆಯವರಿಗೆ ಕೊಟ್ಟ ಬಗ್ಗೆ ಯಾವುದಾದರೂ ದಾಖಲೆಗಳು ಇವೆಯಾ ಎಂದರೆ ಸಾಕ್ಷಿ ದಾಖಲೆ ಇರುವುದಿಲ್ಲ. ಅವರು ಹೇಳಿದ ವ್ಯಕ್ತಿಗಳಿಗೆ ಹಣ ಕೊಡುತ್ತಿದ್ದೆ ಎಂದು ನುಡಿಯುತ್ತಾರೆ.

6. ನನ್ನ ಮದುವೆಗೆ 2015 ರಲ್ಲಿ 80 ಸಾವಿರ ಹಣವನ್ನು ಪಿರ್ಯಾದಿದಾರ ನಗದಿನ ಮುಖಾಂತರ ಕೊಟ್ಟಿರುತ್ತಾರೆ. ದಿನಾಂಕ 06-06-2018 ರಂದು 80 ಸಾವಿರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 23-01-2018 ರಿಂದ 30-01-2019 ರ ಮಧ್ಯದಲ್ಲಿ 20,80,500/- ನನ್ನ ಖಾತೆಗೆ ಹಣ ಸಂದಾಯ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಎಲ್ಲಾ ಹಣ ನನ್ನ ಖಾತೆಗೆ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಕುಂದಾಪುರದಿಂದ ಜಮಾ ಆಗಿರುತ್ತದೆ ಎಂದರೆ ಸರಿಯಲ್ಲ.

7. ಈ ಪ್ರಕರಣದಲ್ಲಿ ದೂರು ಸಲ್ಲಿಸುವ ಪೂರ್ವದಲ್ಲಿ ಪಿರ್ಯಾದಿಯಿಂದ ಒಂದು ನೋಟಿಸು ಬಂದಿದೆ ಎಂದರೆ ಸರಿ. ಸದರಿ ನೋಟಿಸಿಗೆ ಉತ್ತರ ಕೊಟ್ಟಿದ್ದೀರಾ ಎಂದರೆ ಸಾಕ್ಷಿ 1.5 ಲಕ್ಷ ಹಣ ತೆಗೆದುಕೊಂಡು ಕೇಸನ್ನು ವಾಪಾಸು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದರಿಂದ ಉತ್ತರ ನೊಟೀಸು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಎಪ್ರೀಲ್ 2020 ರಲ್ಲಿ 1 ಲಕ್ಷದ 50 ಸಾವಿರ ಹಣವನ್ನು ನಾನು ಕೊಟ್ಟಿರುತ್ತೇನೆ. ಸದರಿ ಹಣವನ್ನು ನನ್ನ ಮಾವನವರು ಅವರನ್ನು ಮನೆಗೆ ಕರೆಯಿಸಿ ಕೊಟ್ಟಿರುತ್ತಾರೆ. ಅವರ ಹೆಸರು ರಾಮ ಪೂಜಾರಿ. ಅವರು ಚಿನ್ನವನ್ನು ಬ್ಯಾಂಕಿನಲ್ಲಿ ಅಡ ಇಟ್ಟು ಕೊಟ್ಟಿರುತ್ತಾರೆ. 1 ಲಕ್ಷ 50 ಸಾವಿರ ಹಣವನ್ನು ದೂರುದಾರನಿಗೆ ಕೊಟ್ಟ

ವಿಚಾರವನ್ನು ನನ್ನ ವಕೀಲರಿಗೆ ದೂರುದಾರನ ಪಾಟೀ ಸವಾಲಿಗ ಸಂದರ್ಭದಲ್ಲಿ ಹೇಳಿರುವುದಿಲ್ಲ.

8. ಪುನಃ ಆತ ನನಗೆ 3 ಲಕ್ಷ ಕೊಡು ಎಂದು ಬೇಡಿಕೆ ಇಟ್ಟಿರುತ್ತಾರೆ. ಸದರಿ ಪ್ರಕರಣವನ್ನು ತೆಗೆಯಲು ಪಿರ್ಯಾದಿದಾರ ಪುನಃ 3 ಲಕ್ಷ ಕೇಳಿದ ಬಗ್ಗೆ ನಾನು ನನ್ನ ವಕೀಲರಿಗೆ ತಿಳಿಸಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ದೂರು ಕೊಡಲು ಹೋಗಿರುತ್ತೇನೆ. ಆದರೆ ಅವರು ವಾರೆಂಟ್ ತೆಗೆಸಿ ಎಂದು ಹೇಳಿರುತ್ತಾರೆ. ಆ ಸಂದರ್ಭದಲ್ಲೂ ಸಹ ನನ್ನ ವಕೀಲರ ಮುಖಾಂತರ ಚೆಕ್ ನ್ನು ದೂರುದಾರ ಚೆಕ್ ನ್ನು ದುರುಪಯೋಗ ಪಡಿಸಿಕೊಂಡಿದ್ದಾನೆ ಎಂದು ನೋಟೀಸು ಕೊಟ್ಟಿರುವುದಿಲ್ಲ. ಚೆಕ್ ದುರುಪಯೋಗ ಆದ ಬಗ್ಗೆ ಕಾನೂನು ಕ್ರಮ ತೆಗೆದುಕೊಂಡಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ 3 ಚೆಕ್ ಗಳನ್ನು ಭದ್ರತೆಗಾಗಿ ತೆಗೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. 2015 ರಲ್ಲಿ ನನಗೂ ಹಾಗೂ ಪಿರ್ಯಾದಿಗೆ ಯಾವುದೇ ವ್ಯವಹಾರ ಇರುವುದಿಲ್ಲ ಎಂದರೆ ಸಾಕ್ಷಿ 2015 ರಲ್ಲಿ 80 ಸಾವಿರ ತೆಗೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಮದುವೆ ಆದ 1 ತಿಂಗಳ ನಂತರ ಬಡ್ಡಿ ಸೇರಿಸಿ 95 ಸಾವಿರ ಕೊಟ್ಟಿರುತ್ತೇನೆ. 2015 ಅಕ್ಟೋಬರ್ ರಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ನವೆಂಬರ್ ನಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. 95 ಸಾವಿರ ಹಾಗೂ 1 ಲಕ್ಷದ 50 ಸಾವಿರ ರೂ. ದೂರುದಾರನಿಗೆ ಕೊಟ್ಟ ಬಗ್ಗೆ ನನ್ನ ಯಾವುದೇ ದಾಖಲೆಯಲ್ಲಿ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ನಗದು ಹಣ ಕೊಟ್ಟಿರುವುದಾಗಿ ನುಡಿಯುತ್ತಾರೆ.

10. ನನ್ನ ಮುಖ್ಯ ವಿಚಾರಣೆಯಲ್ಲಿ 1 ನೇ ಪ್ಯಾರಾ ದಲ್ಲಿ ಹೇಳಿದ ವಿಚಾರಗಳು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ದೂರುದಾರ ಅವರ ಬಾವನಿಂದ ಹಣ ಪಡೆದು ನನ್ನ ಖಾತೆಗೆ ಹಾಕಿಸಿಕೊಂಡು ಇಲ್ಲಿ ಹಣ ಕೊಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆಸರಿಯಲ್ಲ. ಯಾವುದೇ ಚೆಕ್ ನ್ನು ಹಾಗೂ ಈ ಪಿರ್ಯಾದಿಗೆ ಸಂಬಂಧಪಟ್ಟ ಚೆಕ್ ನ್ನು ಹಣ ಸಂದಾಯ ಆದ ಬಗ್ಗೆ ಮರುಪಾವತಿಗಾಗಿ ದೂರುದಾರನಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

11. ಸೊಸೈಟಿಯ ಸಾಲಕ್ಕೆ ಪಿರ್ಯಾದಿ ಗೋಳಿಯಂಗಡಿಯ 50 ಸೆಂಟ್ಸ್ ನ್ನು ಜವಬ್ದಾರಿ ನೀಡಿರುತ್ತಾರೆ ಎಂದರೆ ಸರಿ. ಆ ಸಾಲದ ಬಾಬ್ತನ್ನು ಸೊಸೈಟಿ ಗೆ ಪಾವತಿ ಮಾಡಿರುವುದಿಲ್ಲ. ದೂರುದಾರನ ವಿರುದ್ಧ ರಿಕವರಿ ಪ್ರೋಸಿಡಿಂಗ್ಸ ನಡೆಸುತ್ತಿರುತ್ತಾರೆ ಎಂದರೆ ಸರಿ, ಜಾಮೀನು ಕೊಟ್ಟ ಆಸ್ತಿ ಕಡಿಮೆ ಮೌಲ್ಯ ಆದ್ದರಿಂದ ನನಗೆ ಸಹ ನೋಟಿಸು ಕೊಟ್ಟಿರುತ್ತಾರೆ ಎಂದು

ನುಡಿಯುತ್ತಾರೆ. ಸದರಿ ಸೊಸೈಟಿಯವರು ನನಗೆ ಕೊಟ್ಟ ನೋಟಿಸು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ಸೊಸೈಟಿಯವರು ರಿಕವರಿ ಪ್ರೊಸಿಡಿಂಗ್ಸ್ ಪೂರ್ವದಲ್ಲಿ ನನ್ನನ್ನು ಕೇಳಿದ್ದು, ನಾನು ದೂರುದಾರರ ಮನೆ ತೋರಿಸಿದ್ದೇನೆ ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ 1 ಲಕ್ಷದ 50 ಸಾವಿರ ನಾನು ದೂರುದಾರನಿಗೆ ಕೊಟ್ಟಿದ್ದು, ಪುನಃ ದೂರುದಾರ 3 ಲಕ್ಷ ಕೊಡು ಎಂದು ಕೇಳಿರುತ್ತಾನೆ ಎಂದು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. 20,80,500/- ಹಣವನ್ನು ಆ ದೂರುದಾರನಿಗೆ ಹಿಂತಿರುಗಿಸುವ ವಿಚಾರವಾಗಿ ಈ ಪ್ರಕರಣದ ಚೆಕ್ ನ್ನು ಸ್ವ ಇಚ್ಚೆಯಿಂದ ದೂರುದಾರನಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ